ಇ) ಯಾವ ಯಾವ ಪ್ರದೇಶಗಳಲ್ಲಿ ಪೊಲೀಸ್ ಠಾಣೆ ಅವಶ್ಯವಾಗಿರುತ್ತದೆಯೆಂಬುದನ್ನು ಸ್ಥಳ ಗುರುತಿಸಲಾಗಿದೆಯೇ ಯಾವ ವರ್ಷದಿಂದ ಹೊಸ ಪೊಲೀಸ್ ಠಾಣೆಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಇಲ್ಲ

ಆ) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಕಛೇರಿಗೆ ಪೊಲೀಸ್ ಕಮೀಷನರ್ ಹುಬ್ಬಳ್ಳಿ-ಧಾರವಾಡ ಇವರಿಂದ ಪ್ರಸ್ತಾಪ ಬಂದಿದ್ದು, ಇದು ಇಲಾಖಾ ಮುಖ್ಯಸ್ಥರ ಪರಿಶೀಲನೆಯಲ್ಲಿದೆ.

ಇ) ಪೊಲೀಸ್ ಕಮೀಷನರ್ ಹುಬ್ಬಳ್ಳಿ-ಧಾರವಾಡ ನಗರ ಇವರು ಈ ಕೆಳಕಂಡ 4 ಪ್ರದೇಶಗಳಲ್ಲಿ ಪೊಲೀಸ್ ಠಾಣೆ ತೆರೆಯಲು ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

1) ಎ.ಪಿ.ಎಂ.ಸಿ ಯಾರ್ಡ್ ನವನಗರ
2) ಅಶೋಕನಗರ ಪೊಲೀಸ್ ಹೊರ ಠಾಣೆಯನ್ನು ಮೇಲ್ದರ್ಜೆಗೇರಿಸುವುದು
3) ಹುಬ್ಬಳ್ಳಿಯ ಆನಂದನಗರ ಬಡಾವಣೆಯಲ್ಲಿ ಪೊಲೀಸ್ ಠಾಣೆ
4) ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪೊಲೀಸ್ ಠಾಣೆ

ಪ್ರಸ್ತಾವನೆಯು ಇಲಾಖೆಯ ಪರಿಶೀಲನೆಯಲ್ಲಿದೆ.

ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಗೆ ಕುಡಿಯುವ ನೀರಿನ ಪೂರೈಕೆ

135 (316) - ಶ್ರೀ ಹೊನ್ನಾಳ್ಳಿ ಜಬ್ಬಾರ್ ಖಾನ್ ಹೈಯತ್ (ಹುಬ್ಬಳ್ಳಿ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ ನಾಗರೀಕರಿಗೆ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ, ಕುಡಿಯುವ ನೀರಿನ ತೊಂದರೆ ಹೋಗಲಾಡಿಸಲು ಸರ್ಕಾರ ಕೈಗೊಂಡ ಕ್ರಮವೇನು?

3) ಇದಕ್ಕಾಗಿ ಕಳೆದ 6 ತಿಂಗಳಿನಿಂದ ಈವರೆಗೆ ಸರ್ಕಾರ ಬಿಡುಗಡೆ ಮಾಡ..ವೆಷ್ಟು; ಹಾಗೂ ಖರ್ಚು ಮಾಡಿದ ಹಣವೆಷ್ಟು; ಖರ್ಚು ಮಾಡದೇ ಉಳಿದ ಹಣವೆಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಬಂದಿದೆ.

ಆ) ಹುಬ್ಬಳ್ಳಿ-ಧಾರವಾಡ ಅವಳಿ ನಗರದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ನೀಗಿಸಲು ಮಂಡಲಿಯಿಂದ ಈ ಕೆಳಕಂಡ ಕ್ರಮವನ್ನು ಕೈಗೊಳ್ಳಲಾಗಿದೆ.

ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ನೀರು ಸರಬರಾಜು ಯೋಜನೆಗಳಿಗೆ ತುರ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ. 44.48 ಕೋಟಿಗಳ ಅಂದಾಜಿನಲ್ಲಿ ಸೋರುವಿಕೆ ಇರುವ 27 ಕಿ.ಮೀ. ಉದ್ದದ ಪಿ.ಎಸ್.ಸಿ ಕೊಳವೆ ಮಾರ್ಗಕ್ಕೆ ಬದಲಾಗಿ ಎಂ.ಎಸ್. ಕೊಳವೆಯನ್ನು ಅಳವಡಿಸಲು, 5 ಮೇಲಟ್ಟದ ಜಲ ಸಂಗ್ರಹಾಗಾರ ಮತ್ತು ರೇಚಕ (ಪಂಪು) ಅಳವಡಿಸುವ ಕಾಮಗಾರಿಗಳಿಗೆ ಅವಕಾಶ ಮಾಡಲಾಗಿದೆ.

ಈ ಪ್ರಮುಖ ಕಾಮಗಾರಿಗಳನ್ನು ಮೆ : ಎಲ್ ಅಂಡ್ ಟಿ, ಬೆಂಗಳೂರು ಇವರಿಗೆ ನೇಮಿಸಲಾಗಿದ್ದು, ಕಾಮಗಾರಿಗಳು ಮುಗಿಯುವ ಹಂತದಲ್ಲಿದೆ.

ಈ ಯೋಜನೆಯಡಿ, ಈಗಾಗಲೇ 25 ಕಿ.ಮೀ. ಉದ್ದದ ಎಂ.ಎಸ್. ಕೊಳವೆಯನ್ನು ಸವದತ್ತಿ ಮತ್ತು ಅಮ್ಮಿನಭಾವಿ ಮಾರ್ಗದಲ್ಲಿ ಅಳವಡಿಸಿ ಸೋರುವಿಕೆಯನ್ನು ತಡೆಗಟ್ಟಿ ಹಾಲಿ ಈ ಅವಳಿ ನಗರಗಳಿಗೆ ಸುಮಾರು 55 ದಶಲಕ್ಷ ಲೀಟರ್‌ಗಳಷ್ಟು ನೀರನ್ನು ಸರಬರಾಜು ಮಾಡಲಾಗುತ್ತಿದೆ. ಹಾಗೂ 5 ಮೇಲ್ಮಟ್ಟದ ಜಲಸಂಗ್ರಾಹಾಗಾರಗಳನ್ನು ನಿರ್ಮಿಸಲಾಗಿದೆ. ಹಾಗೂ ಸೌಂವತ್ತಿಯಲ್ಲಿ 1900 ಹೆಚ್.ಪಿ. ಪಂಪ್‌ಸೆಟ್‌ಗಳನ್ನು ಅಳವಡಿಸಲು ಟೆಂಡರ್ ಕರೆಯಲಾಗಿದೆ. ಇದಲ್ಲದೆ, ಹುಬ್ಬಳ್ಳಿ-ಧಾರವಾಡ ತುರ್ತು ಅಭಿವೃದ್ಧಿ ನೀರು ಸರಬರಾಜು ಯೋಜನೆಯ ಪರಿಷ್ಕೃತ ಅಂದಾಜನ್ನು ರೂ. 6384.00 ಲಕ್ಷಗಳಿಗೆ ತಯಾರಿಸಲಾಗಿದ್ದು ಸದರಿ ಪರಿಷ್ಕೃತ ಅಂದಾಜಿನಲ್ಲಿ ಈ ಕೆಳಕಂಡ ಹೆಚ್ಚುವರಿ ಕಾಮಗಾರಿಗಳನ್ನು ಪ್ರಸ್ತಾಪಿಸಲಾಗಿದೆ.

ಅ) ಮಲಪ್ರಭಾ ಅಣೆಕಟ್ಟು ಹಿನ್ನೀರಿನಲ್ಲಿ (ಬ್ಯಾಕ್ ವಾಟರ್ ಹೊಸ ಜ್ಯಾಕ್‌ವೆಲ್ ಕಮ್ ಪಂಪ್‌ಹೌಸ್‌ನ್ನು ಸೌಂದತ್ತಿಯಲ್ಲಿ ನಿರ್ಮಿಸುವುದು.

ಆ) 73.80 ದಶಲಕ್ಷ ಲೀಟರ್ ಸಾಮರ್ಥ್ಯದ ಜಲಶುದ್ದೀಕರಣ ಘಟಕವನ್ನು ಅಮ್ಮಿನಭಾವಿಯಲ್ಲಿ ನಿರ್ಮಿಸುವುದು.

ಇ) ಸೌದಂತ್ತಿಯಲ್ಲಿ 1900 ಅಶ್ವಶಕ್ತಿ ಡೀಪ್‌ವೆಲ್ ಟರ್ಬೈನ್ ಪಂಪ್ ಸೆಟ್‌ಗಳನ್ನು (2 ಸಂಖ್ಯೆಯಲ್ಲಿ) ಹೊಸ ಜಾಕ್‌ವೆಲ್‌ನಲ್ಲಿ ಅಳವಡಿಸುವುದು.

ಮೇಲ್ಕಂಡ ಕಾಮಗಾರಿಗಳಲ್ಲಿ, ಜ್ಯಾವೆಲ್ ಕಮ್ ಪಂಪ್‌ಹೌಸ್ ನಿರ್ಮಿಸುವ ಬಗ್ಗೆ ಮೆ : ಎಲ್ ಅಂಡ್ ಟಿ, ಬೆಂಗಳೂರು ಇವರಿಗೆ ವಹಿಸಿ ಕೊಡಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ. (ಆ) ಮತ್ತು (ಇ) ಕಾಮಗಾರಿಗಳಿಗೆ ಟೆಂಡರ್ ಕರೆದು ಕೈ ಗೊಳ್ಳುವ ಹಂತದಲ್ಲಿದೆ.

3. ಕರ್ನಾಟಕ ಜಲ ಮಂಡಲಿಯಿಂದ ಕಳೆದ 6 ತಿಂಗಳಿನಲ್ಲಿ ಸದರಿ ಕಾಮಗಾರಿಗಳಿಗೆ ರೂ. 319.36 ಲಕ್ಷಗಳು ಖರ್ಚು ಮಾಡಿದ್ದು ಈವರೆಗೆ ಒಟ್ಟು ರೂ. 3131.00 ಲಕ್ಷಗಳು ಈ ಯೋಜನೆಗೆ ಖರ್ಚು ಮಾಡಲಾಗಿದೆ.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ

136 (317) - ಶ್ರೀ ಹೊನ್ನಾಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕ ಜನತೆಯ ಬಹುದಿನಗಳ ಬೇಡಿಕೆಯಾದ ಹೈಕೋರ್ಟ್ ಪೀಠ ಹುಬ್ಬಳ್ಳಿ ನಗರದಲ್ಲಿ ಪ್ರಾರಂಭಿಸಲಿಕ್ಕೆ ಕೈಗೊಂಡ ಕ್ರಮವೇನು;

ಆ) ಹೈಕೋರ್ಟ್ ಪೀಠ ಹುಬ್ಬಳ್ಳಿ ನಗರದಲ್ಲಿ ಸ್ಥಾಪಿಸಿದರೆ ಉತ್ತರ ಕರ್ನಾಟಕಕ್ಕೆ ಆದ "ಅನ್ಯಾಯದ ಕೂಗು" ಎಂಬ ನೋವು ಜನತೆ ಮರೆಯುವುದಿಲ್ಲವೇ;

ಇ) ಹೈಕೋರ್ಟ್ ಪೀಠ ಸ್ಥಾಪನೆಯಲ್ಲಿ ಉಂಟಾಗಿರುವ ತೊಂದರೆಗಳಾವುವು; ವಿವರ ನೀಡುವುದು?